## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ.** 632/2024

ಸಿ.ಡಬ್ಲ್ಯು 03

ಪಿ.ಡಬ್ಲ್ಯು 03

ಸಾಕ್ಷಿದಾರರ ಹೆಸರು - **ರವೀಂದ್ರ ಸುಬ್ರಾಯ ಜೋಶಿ**

ತಂದೆಯ ಹೆಸರು - **ಸುಬ್ರಾಯ ಜೋಶಿ**

ವಯಸ್ಸು - 57 ವರ್ಷ

ಉದ್ಯೋಗ - ವ್ಯಾಪಾರ

ವಾಸ್ತವ್ಯ - ಬಂಗ್ಲೆಗುಡ್ಡ, ಗೋಕರ್ಣ

(ಇಂದು ದಿನಾಂಕಃ **23-08-2025** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾ.ಸಾ.2 ರವರ ಪರಿಚಯ ಇದೆ. 3ನೇ ಆರೋಪಿಯ ಪರಿಚಯ ಇದ್ದು, 1 ಹಾಗೂ 2ನೇ ಆರೋಪಿಯ ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿಯನ್ನು ನಾನು ನೋಡಿರುತ್ತೇನೆ.

ಪೊಲೀಸರು ನನ್ನನ್ನು ನನ್ನ ಮನೆಯ ಪಕ್ಕದಲ್ಲಿ ಇರುವ ಕಾಮತ್ ರೆಸಾರ್ಟಗೆ ಕರೆದಿದ್ದು, ನನ್ನ ಸಹಿಯನ್ನು ಹಾಕಿ ಎಂದು ಕೇಳಿಕೊಂಡಿದ್ದು, ನಾನು ಸಹಿಯನ್ನು ಹಾಕಿರುತ್ತೇನೆ. ಪೊಲೀಸರು ನನ್ನನ್ನು ದಾಳಿಗೆ ಕರೆದಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ದಾಳಿಯನ್ನು

ಮಾಡಿರುವುದಿಲ್ಲ ಹಾಗೂ ಯಾವುದೇ ಆರೋಪಿಯನ್ನು ಹಾಗುಾ ವಸ್ತುವನ್ನು ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಸದ್ರಿ ದಾಖಲಾತಿಗಳಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಗಳು **ಪಂಚನಾಮೆ** ಹಾಗೂ **ಕಚ್ಚಾ ನಕಾಶೆ**ಯಾಗಿದ್ದು, **ಪಂಚನಾಮೆಯನ್ನು** ಈಗಾಗಲೇ **ನಿ.ಪಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.1ಸಿ ಎಂದು** ಗುರುತಿಸಲಾಯಿತು. **ಕಚ್ಚಾನಕಾಶೆಯು** ಈಗಾಗಲೇ **ನಿ.ಪಿ.2 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.2ಸಿ ಎಂದು** ಗುರುತಿಸಲಾಯಿತು. ನಿಪಿ 1 ಹಾಗೂ 2 ರಲ್ಲಿ ರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸದ್ರಿ ದಾಖಲಾತಿಗಳಿಗೆ ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿಯನ್ನು ಹಾಕಿರುತ್ತೇನೆ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.3** ಎಂದು ಗುರುತಿಸಲಾಗಿರುತ್ತದೆ. ನಿಪಿ 3 ನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೇಮಾಲುಗಳನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಗೆ ಮು.ಮಾ 1 ರಿಂದ 4 ರಲ್ಲಿ ಇರುವ ಸಹಿಯನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಮು.ಮಾ 1 ಬಿ ಯಿಂದ 4 ಸಿ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

C.W. 03 PW 03

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 25/11/2023 ರಂದು ಮಧ್ಯಾಹ್ನ ಚಾಸಾ 1 ರವರು ನನ್ನನ್ನು ಹಾಗೂ ಚಾಸಾ 2 ರವರನ್ನು ಠಾಣೆಗೆ ಬರಮಾಡಿಕೊಂಡು ಕಾಮತ್ ಪಾರ್ಮ ಹೌಸ್‌ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವ ಕುರಿತು ಖಚಿತ ಬಾತ್ಮಿ ಬಂದಿದ್ದು, ದಾಳಿಗೆ ಸಹಕರಿಸುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ಕಾಮತ್ ಲಾಡ್ಜಗೆ ಹೋದಾಗ ಚಾಸಾ 4 ರಿಂದ ಚಾಸಾ 8 ರವರು ಇದ್ದರು ಎಂದರೆ ಸರಿಯಲ್ಲ, ಸದ್ರಿ ಸಂದರ್ಭದಲ್ಲಿ ಮು.ಮಾ. 1 ರಿಂದ 4 ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತಂತೆ ನಿಪಿ 1 ರಂತೆ 13-15 ಗಂಟೆಯಿಂದ 15-15 ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ನಿಪಿ 2 ರಂತೆ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ 1 ರಿಂದ 3 ನೇ ಆರೋಪಿತರನ್ನು ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ ಮು.ಮಾ 1 ರಿಂದ 4 ನ್ನು ವಶಪಡಿಸಿಕೊಂಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಶ್ರೀ. ಎಮ್.ಜಿ.ಎಸ್. ವಕೀಲರಿಂದ**

3ನೇ ಆರೋಪಿತನು ನನ್ನ ಊರಿನವರಾಗಿರುವುದರಿಂದ ಅವರ ಪರಿಚಯ ಇದೆ. ಪೊಲೀಸರು ಸುರಕ್ಷತಾ ದೃಷ್ಟಿಯಿಂದ ತಾವು ಹೋದ ಸ್ಥಳದ ಇಮಾರತುಗಳಲ್ಲಿ ಪರೀಲಿಸಿದ ಕುರಿತಾಗಿ ಭಾವಚಿತ್ರವನ್ನು ತೆಗೆಯುತ್ತಾರೆ ಎಂದರೆ ಸರಿಯಲ್ಲ. ನಿಪಿ 3 ನ್ನು ಸಹ ಇದೇ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

C.W. 03 PW 03

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾ.ದಂ. ಕುಮಟಾ